ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1677/2024

| | | | |
|---|---|---|---|
| ಹೆಸರು | : | ಚೇತನ್ ದೇವುಡ | ಸಿ .ಡಬ್ಲ್ಯೂ :15 |
| ತಂದೆ ಹೆಸರು | : | ಅಂಬಾಬಾಯಿ | ಪಿ .ಡಬ್ಲ್ಯೂ :13 |
| ವಯಸ್ಸು | : | 29 ವರ್ಷ | |
| ಉದ್ಯೋಗ | : | Business | |
| ವಾಸಸ್ಥಳ | : | ಬೆಂಗಳೂರು | |

ಸಾಕ್ಷಿಯನ್ನು ದಿಃ 15-07-2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ದಿಃ 29-06-2024 ರಂದು ನಮ್ಮ ಅಂಗಡಿಯಾದ ಕಾಟ್ರೇಜ್ ಕಾರ್ಟ್ ಗೆ ಪೊಲೀಸರು ಆರೋಪಿತರೊಡನೆ ಬಂದಿದ್ದರು . ಆರೋಪಿತರು ಹಿಂದೆ ಅಂಗಡಿಗೆ ಪ್ರಿಂಟರ್ ತಂದುಕೊಟ್ಟಿದ್ದರು . ಮೇಲೆ ಹೇಳಿದ ದಿನಾಂಕದಂದು ಪೊಲೀಸರು ಬೆಳಗ್ಗೆ 9.30 ರಿಂದ 10.15 ರವರೆಗೆ ನಮ್ಮ ಅಂಗಡಿಯಲ್ಲಿ ಮಹಜರು ಕ್ರಮ ಜರುಗಿಸಿದ್ದಾರೆ ಮತ್ತು 21 ಪ್ರಿಂಟರ್ ಗಳನ್ನು ವಶಪಡಿಸಿಕೊಂಡಿದ್ದಾರೆ . 10 ಅಥವಾ 15 ದಿನಗಳಿಗೆ ಒಂದರಂತೆ 6 ತಿಂಗಳವರೆಗೆ ಆರೋಪಿತರು ನಮ್ಮ ಅಂಗಡಿಗೆ ಪ್ರಿಂಟರ್ ಗಳನ್ನು ಮಾರಾಟ ಮಾಡಿದ್ದರು .ನಾನು ಅದನ್ನು ಖರೀದಿಸಿ ಅವರಿಗೆ ಹಣ ನೀಡಿದ್ದೇನೆ . ಮೇಲೆ ಹೇಳಿದ ದಿನಾಂಕದಂದು ಪೊಲೀಸರೊಡನೆ ಚಾಸಾ -12 ಮತ್ತು 13 ರವರು ಬಂದಿದ್ದರು .

ಪಾಟೀಸವಾಲು: ಆರೋಪಿ ಪರ ವಕೀಲರಿಂದಃ-

ನಮ್ಮ ಕಾಟ್ರೇಜ್ ಕಾರ್ಟ್ ಶಾಪ್ ನಲ್ಲಿ ಪ್ರಿಂಟರ್ ಗಳನ್ನು ಕೇವಲ ಸರ್ವೀಸ್ ಮಾತ್ರ ಮಾಡುತ್ತೇವೆ . ಪ್ರಿಂಟರ್ ಗಳನ್ನು ನಮ್ಮ ಶಾಪ್ ಗೆ ಸರ್ವೀಸ್ ಗೆಂದು ತರುತ್ತಾರೆ ಮಾರಾಟ ಮಾಡಲು ಯಾರು ಬರುವುದಿಲ್ಲ ಎಂದರೆ ಸರಿ . ಆರ

ಆರೋಪಿತರು ಪ್ರಿಂಟರ್ ಗಳನ್ನು ಎಲ್ಲಿಂದ ತಂದಿದ್ದರು ಎಂಬ ಬಗ್ಗೆ ವಿಚಾರಿಸಿದ್ದೇನೆ ಅವರು ತಾನು ಅಂಗಡಿಯನ್ನು ಹೊಂದಿದ್ದು ಅಲ್ಲಿಂದ ತಂದಿರುವುದಾಗಿ ತಿಳಿಸಿದ್ದರು . ಆರೋಪಿತರು ಪ್ರಿಂಟರ್ ಗಳನ್ನು ಮಾರಾಟ ಮಾಡಲು ನಮ್ಮ ಶಾಪ್ ಗೆ ತಂದಿದ್ದರು . ನಾನು ಆ ದಿನ ಆರೋಪಿತರ ಬಳಿ ಗುರುತಿನ ಚೀಟಿ ಕೇಳಿದ್ದೆ ಆದರೆ ಅವರು ನೀಡಲಿಲ್ಲ . ಸರ್ವೀಸ್ ಗಾಗಿ ನಿಮ್ಮ ಶಾಪ್ ನಲ್ಲಿ ಎಷ್ಟು ಪ್ರಿಂಟರ್ ಗಳನ್ನು ಇಟ್ಟಿದ್ದೀರಿ ಎಂದರೆ ಸಾಕ್ಷಿಯು ಒಂದು ಬಾರಿಗೆ 40 ರಿಂದ 50 ಪ್ರಿಂಟರ್ ಗಳನ್ನು ಇಟ್ಟಿರುತ್ತೇವೆ ಎಂದು ತಿಳಿಸಿದ್ದಾರೆ . ನಮ್ಮ ಶಾಪ್ ಗೆ ಹೆಚ್ ಪಿ ಮತ್ತು ಕೆನಾನ್ ಕಂಪನಿಯ ಪ್ರಿಂಟರ್ ಗಳನ್ನು

ಸರ್ವೀಸ್ ಗೆ ತರುತ್ತಾರೆ . ಪೊಲೀಸರು ವಶಪಡಿಸಿಕೊಂಡಿದ್ದಾರೆ ಎಂದು ಹೇಳುವ 21 ಪ್ರಿಂಟರ್ ಗಳನ್ನು ಆರೋಪಿತರೇ ನಮ್ಮ ಶಾಪ್ ಗೆ ತಂದುಕೊಟ್ಟಿದ್ದರು ಎಂದು ಗುರುತಿಸಲು ಯಾವುದೇ ನಿಶಾನೆಗಳನ್ನು ಮಾಡಿದ್ದಿರಾ ಎಂದರೆ ಮಾಡಿದ್ದೆವು ಎಂದು ತಿಳಿಸಿದ್ದಾರೆ . ಸದರಿ ನಿಶಾನೆಗಳ ಬಗ್ಗೆ ಪೊಲೀಸರಿಗೆ ಯಾವುದೇ ಮಾಹಿತಿ ನೀಡಿಲ್ಲ . ನಾನು ಹೇಳುವಂತೆ ಆರೋಪಿತರು ನಮ್ಮ ಶಾಪ್ ಗೆ ಎಂದು ಸಹಾ ಬಂದಿಲ್ಲ ಮತ್ತು ಯಾವುದೇ ಪ್ರಿಂಟರ್ ಗಳನ್ನು ಮಾರಾಟ ಮಾಡಿಲ್ಲ , ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಶಾಪ್ ನಲ್ಲಿ ಕೇವಲ ಪ್ರಿಂಟರ್ ಗಳ ಸರ್ವೀಸ್ ಮಾತ್ರ ಮಾಡುವುದರಿಂದ ಆರೋಪಿತರ ಬಳಿ ಯಾವುದೇ ಪ್ರಿಂಟರ್ ಗಳನ್ನು ಖರೀದಿಸುವ ಅವಶ್ಯಕತೆ ಬಂದಿಲ್ಲ ಆದರೂ ಸಹಾ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪೊಲೀಸರಿಗೆ ನಮ್ಮ ಅಂಗಡಿಗೆ ಸರ್ವೀಸ್ ಗೆಂದು ನೀಡಲಾಗಿದ್ದ 21 ಪ್ರಿಂಟರ್ ಗಳನ್ನು ನೀಡಿದ್ದೇನೆ , ಸದರಿ ಪ್ರಿಂಟರ್ ಗಳಿಗೂ ಮತ್ತು ಆರೋಪಿತರಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಪೊಲೀಸರು ಹೇಳಿಕೊಟ್ಟಂತೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ: ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ , ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.